*(ದಿನಾಂಕಃ**12/09/2025**ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)*

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ.ಸಿ.ಎಚ್. ವಕೀಲರಿಂದಃ-**

18. ಆರೋಪಿ ಕಛೇರಿಗೆ ನಾವು ಹೋದಾಗ ಸಾಕಷ್ಟು ಜನ ಓಡಾಡುತ್ತಿದ್ದರು ಎಂದರೆ ಇರಬಹುದು. ನಾನು ಎಸಿಬಿ ಕಾರ್ಯಾಲಯಕ್ಕೆ ಹೋದಾಗ ಮಧ್ಯಾಹ್ನ 1.00 ಘಂಟೆಯಾಗಿತ್ತು. ಪಿರ್ಯಾದಿದಾರ, ಚಾಸಾ-2 ಅಕ್ಷಯ ಮತ್ತು ಪೊಲೀಸರು ಇದ್ದರು. ನಾನು ಪಿರ್ಯಾದಿದಾರರೊಂದಿಗೆ ಹೋಗಿಲ್ಲ. ನಾನು ಹೋಗುವ ಮುಂಚೆಯೇ ಪೊಲೀಸರು ವಸ್ತುಗಳನ್ನು ತಯಾರಿಸಿಟ್ಟಿದ್ದರು ಎನ್ನುವುದು ಸುಳ್ಳು. ಪೊಲೀಸರು ನೋಟುಗಳಿಗೆ ಪೌಡರ ಸವರಿ ನನ್ನ ಕೈಗೆ ನೀಡಿ ನನ್ನ ಕೈ ತೊಳೆದಿಲ್ಲ. ಪೊಲೀಸ ಠಾಣೆಯಲ್ಲಿ ತಯಾರಿಸಿದ ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಓದಿ ಹೇಳಿದರು.

19. ಯಾವ ವ್ಯಕ್ತಿಯನ್ನು ಟ್ರ್ಯಾಪ್ ಮಾಡಲು ಹೋಗುತ್ತಿದ್ದೇವೆ ಎಂಬುದನ್ನು ಗೌಪ್ಯವಾಗಿ ಇಡಲಾಗಿತ್ತು ಎಂದರೆ ನಮಗೆ ತಿಳಿಸಿದ್ದರು. ನಾನು ಪೊಲೀಸ ಅಧಿಕಾರಿ ಪ್ರಹ್ಲಾದ ಎಂಬುವವರೊಂದಿಗೆ ಆರೋಪಿ ಕಾರ್ಯಾಲಯಕ್ಕೆ ಹೋದೆ. ನಾವು ಜೀಪಿನಲ್ಲಿ ಕುಳಿತು ವೀಕ್ಷಿಸುತ್ತಿದ್ದೆವು. ಕಾರ್ಯಾಲಯದ ಒಳಗೆ ಚಾಸಾ-1 ನಡೆಸಿದ ಮಾತುಕತೆ ನಾನು ಸ್ವತಃ ಕೇಳಿಸಿಕೊಂಡಿಲ್ಲ. ಚಾಸಾ-1 ಸನ್ನೆ ಮಾಡಿದ್ದನ್ನು ನಾನು ಸ್ವತಃ ನೋಡಿಲ್ಲ, ಪೊಲೀಸರು ಹೇಳಿದ್ದರಿಂದ ಗೊತ್ತಾಯಿತು. ಆರೋಪಿ ಕಾರ್ಯಾಲಯದಿಂದ ಹೊರಗೆ ಬಂದಿದ್ದನ್ನು ನಾನು ನೋಡಿಲ್ಲ. ನಾನು, ಪೊಲೀಸರು ಮತ್ತು ಇತರರು ಆರೋಪಿಯನ್ನು ಕರೆದುಕೊಂಡು ಕಾರ್ಯಾಲಯದ ಒಳಗೆ ಹೋದೆವು ಎಂದರೆ ಆರೋಪಿ ಒಳಗೇ ಇದ್ದ.

20. ಕಾರ್ಯಾಲಯದಲ್ಲಿ 3 ದಿಕ್ಕಿನಲ್ಲಿ ಟೇಬಲ್, ಅಲ್ಮೇರಾ ಮತ್ತು ಖುರ್ಚಿ ಇದ್ದವು ಎಂದರೆ ನಾನು ಆರೋಪಿ ಟೇಬಲ್ ಮಾತ್ರ ನೋಡಿದೆ. ಬೇರೆ ವಿಷಯ ಗೊತ್ತಿಲ್ಲ. ಆರೋಪಿ ಕಾರ್ಯಾಲಯಕ್ಕೆ ಹೋದ ಮರುದಿನ ಪುನಃ ನಾನು ಎಸಿಬಿ ಕಾರ್ಯಾಲಯಕ್ಕೆ ಹೋದೆ ಎನ್ನುವುದು ನಿಜ. ಠಾಣೆಯಲ್ಲಿ ತಯಾರಿಸಿದ ಪಂಚನಾಮೆಗಳಿಗೆ ಸಹಿ ಮಾಡಿದೆ ಎನ್ನುವುದು ನಿಜ.

21. ನಾನು ಪೊಲೀಸರೊಂದಿಗೆ ಆರೋಪಿ ಕಾರ್ಯಾಲಯಕ್ಕೆ ಹೋಗಿಲ್ಲ, ಆರೋಪಿಯನ್ನು ನೋಡಿಲ್ಲ, ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ತಯಾರಿಸಿಲ್ಲ ಹಾಗೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಪೊಲೀಸರ ಮಾತು ಕೇಳಿ ಮುಖ್ಯ ವಿಚಾರಣೆ ಯಲ್ಲಿಯ ವಿಷಯಗಳನ್ನು ಹೇಳಿದ್ದೇನೆ ಎನ್ನುವುದು ಸುಳ್ಳು. ಧ್ವನಿ ಮುದ್ರಣವನ್ನು ನನ್ನ ಸಮಕ್ಷಮ ಆಲಿಸಿಲ್ಲ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ.